**ಪಿ.ಡಬ್ಲ್ಯೂ ಃ 3 - ಮಹದೇವ**

**ಸಾಕ್ಷಿಗೆ ದಿನಾಂಕಃ 19.12.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ : ಶ್ರೀ ವಕೀಲರಿಂದಃ**

ನಾನು **10**ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು, ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಮೃತ ಮಹೇಶ್ ನನ್ನ ತಮ್ಮ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಅಪಘಾತವಾದ ಬಗ್ಗೆ ಮಾಹಿತಿಯನ್ನು ಪೊಲೀಸರು **5**ನೇ ತಾರೀಖಿನ ರಾತ್ರಿ ನನಗೆ ತಿಳಿಸಿರುತ್ತಾರೆ. ಮರುದಿನ ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಯಾವ ವಾಹನದಿಂದ ಅಪಘಾತವಾಗಿದೆ ಎಂದು ನನಗೆ ಆ ದಿನದಂದು ಗೊತ್ತಾಗಿರುತ್ತದೆ. ನನ್ನ ದೂರಿನಲ್ಲಿ ಬರೆದಿರುವ ವಿಚಾರಗಳು ಸರಿ ಇರುತ್ತದೆ. ಅದೇ ರೀತಿ ನಾನು ಮತ್ತು ಇತರರು ಪೊಲೀಸರ ಮುಂದೆ ನೀಡಿರುವ ಹೇಳಿಕೆಗಳ ಸಂಗತಿಗಳು ಸರಿ ಇರುತ್ತವೆ. ಅಪಘಾತದ ದಿನ ರಾತ್ರಿ **10-30**ರಿಂಧ **11-00** ರ ಅವಧಿಯಲ್ಲಿ ನಾನು ಅಪಘಾತದ ಸ್ಥಳಕ್ಕೆ ಭೇಟಿ ನೀಡಿದ್ದೆ. ನಾನು ಸ್ಥಳಕ್ಕೆ ಹೋದಾಗ ನನ್ನ ತಮ್ಮ ಚಾಲನೆ ಮಾಡುತ್ತಿದ್ದ ಸ್ಕೂಟರ್ ಮಾತ್ರ ಇತ್ತು. ಪೊಲೀಸರು ಮಹಜರ್ ಮಾಡಲು ಬಂದಾಗ ನಾನೇ ಸ್ಥಳವನ್ನು ತೋರಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳು ಸರಿ ಇರುತ್ತದೆ. ನನ್ನ ತಮ್ಮ ಮೋಟಾರ್ ಸೈಕಲ್‌ನ್ನು ಚಾಲನೆ ಮಾಡಿಕೊಂಡು ಬರುತ್ತಿರುವಾಗ ಯಾವುದೋ ವಾಹನ ನನ್ನ ತಮ್ಮನ ಬೈಕ್‌ಗೆ ಡಿಕ್ಕಿ ಪಡಿಸಿರುತ್ತದೆ ಎಂದು ಪಂಚನಾಮೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಸಿಸಿ ಟಿವಿ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ.

**2.** ಪೊಲೀಸರು ಅಪಘಾತ ಪಡಿಸಿದ ವಾಹನ ಇದೇ ಎಂದು ತೋರಿಸಿದ್ದು, ನಾನು ದಾಖಲೆಗೆ ಆ ಸಂಬಂಧವಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ತಮ್ಮ ಚಾಲನೆ

ಮಾಡುತ್ತಿದ್ದ ಬೈಕ್ ಮಾದೇಶ್‌ರವರಿಗೆ ಸೇರಿದ್ದಾಗಿರುತ್ತದೆ. ನನ್ನ ತಮ್ಮನಿಗೆ ಚಾಲನಾ ಪರವಾನಿಗೆ ಇತ್ತು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಮ್ಮನ ವಾಹನಕ್ಕೆ ಅಪಘಾತದ ಸಮಯದಲ್ಲಿ ವಿಮೆ ಇರಲಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಮ್ಮನು ಚಾಲನೆ ಮಾಡುತ್ತಿದ್ದ ಬೈಕ್‌ನ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ನನ್ನ ತಮ್ಮನಿಗೆ ವೇತನವನ್ನು ಬ್ಯಾಂಕ್‌ನ ಖಾತೆಯ ಮೂಲಕ ಜಮೆ ಮಾಡುತ್ತಿದ್ದರು. ಯಾವ ಬ್ಯಾಂಕ್‌ಗೆ ಸದರಿ ವೇತನ ಜಮೆಯಾಗುತ್ತಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಮತ್ತು ಆ ಸಂಬಂಧವಾಗಿ ದಾಖಲೆ ಇರುವುದಿಲ್ಲ. ನನ್ನ ತಮ್ಮನು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದು ಆ ಸಂಬಂಧವಾಗಿ ದಾಖಲೆ ಹಾಜರುಪಡಿಸಿರುತ್ತೇನೆ. ನನ್ನ ತಮ್ಮನು ಎಬಿಬಿ ಇಂಡಿಯಾ ಪ್ರೈವೇಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಸುಳ್ಳು ಹೇಳಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಮ್ಮನು ಮಾಸಿಕ 50 ರಿಂದ 1 ಲಕ್ಷ ರೂ. ಆದಾಯ ಹೊಂದಿದ್ದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಮ್ಮನ ಉತ್ತರ ಕ್ರಿಯೆಗೆ 1 ಲಕ್ಷ ಮತ್ತು ಆಂಬುಲೆನ್ಸ್‌ಗೆ 10 ಸಾವಿರ ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮನ ನಿರ್ಲಕ್ಷ್ಯತನದಿಂದ ಅಪಘಾತವಾಗಿದ್ದು, ಟ್ರಾಕ್ಟರ್ ಮತ್ತು ಟ್ರೈಲರ್‌ಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವಾಹನ ಸಿಗದ ಕಾರಣ ಒಂದು ತಿಂಗಳ ನಂತರ 1ನೇ ಎದುರುದಾರರ ಟ್ರಾಕ್ಟರ್ ಮತ್ತು ಟ್ರೈಲರ್‌ನ್ನು ಅಳವಡಿಸಿರುತ್ತೇವೆ ಎಂದರೆ ಸರಿಯಲ್ಲ.

3. ನಾನು ದೂರು ನೀಡಿದ ನಂತರ ಪೊಲೀಸರು ನನ್ನ ಹೇಳಿಕೆಯನ್ನು ಸಹ ಪಡೆದಿರುತ್ತಾರೆ. ಸದರಿ ಹೇಳಿಕೆಯ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಟ್ರಾಕ್ಟರ್ ಮತ್ತು 1ನೇ ಎದುರುದಾರರು ನನಗೆ ಪರಿಚಯಸ್ತರು ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವಾಹನ ಸಿಗದ ಕಾರಣ ನಾನು 1ನೇ ಎದುರುದಾರರು ಪೊಲೀಸರು ಎಲ್ಲಾ ಸೇರಿ ಸುಳ್ಳು ಪ್ರಕರಣವನ್ನು 1ನೇ ಎದುರುದಾರ ಚಾಲಕನ ವಿರುದ್ದ ದಾಖಲು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ ಎ ಸಿ ಟಿ, ಮಳವಳ್ಳಿ.